**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೇಳನೆಯ ಅಧಿವೇಶನ**

# ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–84)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ XXIX)ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬಾಂಬೆ ಸಾರ್ವಜನಿಕ ನ್ಯಾಸ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 4ರ ಪ್ರತಿಯೋಜನೆ.-** ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ XXIX)ರಲ್ಲಿ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), ಪ್ರಕರಣ 4ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"4. ಧರ್ಮಾದಾಯ ಆಯುಕ್ತರು ಮತ್ತು ಜಂಟಿ ಧರ್ಮಾದಾಯ ಆಯುಕ್ತರ ನೇಮಕಾತಿ.-** (1) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರು ಧರ್ಮಾದಾಯ ಆಯುಕ್ತರಾಗಿರತಕ್ಕದ್ದು.

(2) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯು ಜಂಟಿ ಧರ್ಮಾದಾಯ ಆಯುಕ್ತರಾಗಿರತಕ್ಕದ್ದು."

**3. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 5ರಲ್ಲಿ,-

(i) ಉಪ-ಪ್ರಕರಣ (2)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಸಂಬಂಧಪಟ್ಟ ಉಪ ವಿಭಾಗದ ಉಪ ವಿಭಾಗಾಧಿಕಾರಿಯು ಉಪಧರ್ಮಾದಾಯ ಆಯುಕ್ತರಾಗಿರತಕ್ಕದ್ದು."

(ii) ಉಪ-ಪ್ರಕರಣ (2ಎ) ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2ಎ) ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಸಹಾಯಕ ಧರ್ಮಾದಾಯ ಆಯುಕ್ತರಾಗಿರತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ XXIX)ನ್ನು,-

(i) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಇವರನ್ನು ಧರ್ಮಾದಾಯ ಆಯುಕ್ತರನ್ನಾಗಿ;

(ii) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯನ್ನು ಜಂಟಿ ಧರ್ಮಾದಾಯ ಆಯುಕ್ತರನ್ನಾಗಿ;

(iii) ಸಂಬಂಧಪಟ್ಟ ಉಪ ವಿಭಾಗದ ಉಪ ವಿಭಾಗಾಧಿಕಾರಿಯು ಉಪ ಧರ್ಮಾದಾಯ ಆಯುಕ್ತರನ್ನಾಗಿ; ಮತ್ತು

(iv) ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಸಹಾಯಕ ಧರ್ಮಾದಾಯ ಆಯುಕ್ತರನ್ನಾಗಿ;

- ನೇಮಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**
**ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950**
**(1950ರ ಬಾಂಬೆ ಅಧಿನಿಯಮ XXIX)ರ ಉದ್ಧೃತ ಭಾಗ**

**xxx xxx xxx**

4. ಧರ್ಮಾದಾಯ ಆಯುಕ್ತ ಅಥವಾ ಜಂಟಿ ಧರ್ಮಾದಾಯ ಆಯುಕ್ತರ ನೇಮಿಸುವುದಕ್ಕಾಗಿ ಅರ್ಹತೆಗಳು.- ಧರ್ಮಾದಾಯ ಆಯುಕ್ತ ಅಥವಾ ಜಂಟಿ ಧರ್ಮಾದಾಯ ಆಯುಕ್ತನಾಗಿ ನೇಮಕಾತಿ ಹೊಂದುವ ವ್ಯಕ್ತಿಯು-

(ಎ) ಜಿಲ್ಲಾ ನ್ಯಾಯಾಧೀಶ ಅಥವಾ ಬಾಂಬೆ ನಗರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ, ಅಥವಾ ಪ್ರೆಸಿಡೆನ್ಸಿ ಲಘು ವ್ಯಾಜ್ಯಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ದರ್ಜೆಗೆ ಕಡಿಮೆಯಲ್ಲದ ನ್ಯಾಯಿಕ ಪದವನ್ನು ಧಾರಣೆ ಮಾಡಿದವರು ಅಥವಾ ಮಾಡಿದವರಾಗಿರತಕ್ಕದ್ದು, ಅಥವಾ

(ಬಿ) ಹತ್ತು ವರ್ಷಗಳಿಗೆ ಕಡಿಮೆಯಿಲ್ಲದಂತೆ-

(i) ಭಾರತೀಯ ವಕೀಲರ ಪರಿಷತ್ತುಗಳ ಅಧಿನಿಯಮ, 1926ರಡಿಯಲ್ಲಿ ನೋಂದಾಯಿತನಾದ ನ್ಯಾಯವಾದಿ,

(ii) ಉಚ್ಚ ನ್ಯಾಯಾಲಯದ ಅಟಾರ್ನಿ, ಅಥವಾ

(iii) ಬಾಂಬೆ ಪ್ಲೀಡರ್ಸ್ ಅಧಿನಿಯಮ, 1920ರಡಿಯಲ್ಲಿ ನೋಂದಾಯಿತನಾದ ಪ್ಲೀಡರ್

- ಆಗಿದ್ದವರಾಗಿರತಕ್ಕದ್ದು.

**5. ಉಪ ಮತ್ತು ಸಹಾಯಕ ದರ್ಮಾದಾಯ ಆಯುಕ್ತ.-** (1) ಅಂಥ ವಿಭಾಗಗಳಿಗೆ ಅಥವಾ ಉಪ-ವಿಭಾಗಗಳಿಗೆ ಅಥವಾ ಅಂಥ ಸಾರ್ವಜನಿಕ ನ್ಯಾಸಗಳಿಗೆ ಅಥವಾ ಅಂಥ ಸಾರ್ವಜನಿಕ ನ್ಯಾಸಗಳ ವರ್ಗಗಳಿಗೆ ಅಗತ್ಯವೆಂದು ಭಾವಿಸಬಹುದಾದಂಥ ಸಂಖ್ಯೆಯ ಉಪ ಮತ್ತು ಸಹಾಯಕ ಧರ್ಮಾದಾಯ ಆಯುಕ್ತರನ್ನು ಸಹ ರಾಜ್ಯ ಸರ್ಕಾರವು ನೇಮಕ ಮಾಡಬಹುದು.

(2) ಉಪ ಧರ್ಮಾದಾಯ ಆಯುಕ್ತನಾಗಿ ನೇಮಕಾತಿ ಹೊಂದುವ ವ್ಯಕ್ತಿಯು-

(ಎ) ಸಿವಿಲ್ ನ್ಯಾಯಾಧೀಶ (ಹಿರಿಯ ಶ್ರೇಣಿ) ಅಥವಾ ಬಾಂಬೆ ಲಘು ವ್ಯಾಜ್ಯಗಳ ನ್ಯಾಯಾಲಯದ ನ್ಯಾಯಾಧೀಶರ ದರ್ಜೆಗೆ ಕಡಿಮೆಯಲ್ಲದ ನ್ಯಾಯಿಕ ಪದವನ್ನು ಅಥವಾ ರಾಜ್ಯ ಸರ್ಕಾರವು ತತ್ಸಮಾನವೆಂದು ಅಭಿಪ್ರಾಯ ಪಡುವ ಯಾವುದೇ ಪದವನ್ನು ಧಾರಣೆ ಮಾಡಿದವರು ಅಥವಾ ಮಾಡಿದವರಾಗಿರತಕ್ಕದ್ದು, ಅಥವಾ

(ಬಿ) ಎಂಟು ವರ್ಷಗಳಿಗೆ ಕಡಿಮೆಯಿಲ್ಲದಂತೆ,-

(i) ಭಾರತೀಯ ವಕೀಲರ ಪರಿಷತ್ತುಗಳ ಅಧಿನಿಯಮ, 1926ರಡಿಯಲ್ಲಿ ನೋಂದಾಯಿತನಾದ ನ್ಯಾಯವಾದಿ,

(ii) ಉಚ್ಚ ನ್ಯಾಯಾಲಯದ ಅಟಾರ್ನಿ, ಅಥವಾ

(iii) ಬಾಂಬೆ ಪ್ಲೀಡರ್ಸ್ ಅಧಿನಿಯಮ, 1920ರಡಿಯಲ್ಲಿ ನೋಂದಾಯಿತನಾದ ಪ್ಲೀಡರ್

- ಆಗಿದ್ದವರಾಗಿರತಕ್ಕದ್ದು.

(2ಎ) ಸಹಾಯಕ ಧರ್ಮಾದಾಯ ಆಯುಕ್ತನಾಗಿ ನೇಮಕಾತಿ ಹೊಂದುವ ವ್ಯಕ್ತಿಯು-

(ಎ) ಸಿವಿಲ್ ನ್ಯಾಯಾಧೀಶ (ಕಿರಿಯ ಶ್ರೇಣಿ)ರ ದರ್ಜೆಗೆ ಕಡಿಮೆಯಲ್ಲದ ನ್ಯಾಯಿಕ ಪದವನ್ನು ಅಥವಾ ರಾಜ್ಯ ಸರ್ಕಾರವು ತತ್ಸಮಾನವೆಂದು ಅಭಿಪ್ರಾಯ ಪಡುವ ಯಾವುದೇ ಪದವನ್ನು ನಾಲ್ಕು ವರ್ಷಗಳಿಗೆ ಕಡಿಮೆಯಲ್ಲದಂತೆ ಧಾರಣೆ ಮಾಡಿದವರು ಅಥವಾ ಮಾಡಿದವರಾಗಿರತಕ್ಕದ್ದು, ಅಥವಾ

(ಬಿ) ಏಳು ವರ್ಷಗಳಿಗೆ ಕಡಿಮೆಯಿಲ್ಲದಂತೆ,-

(i) ಭಾರತೀಯ ವಕೀಲರ ಪರಿಷತ್ತುಗಳ ಅಧಿನಿಯಮ, 1929ರಡಿಯಲ್ಲಿ ನೋಂದಾಯಿತನಾದ ನ್ಯಾಯವಾದಿ,

(ii) ಉಚ್ಚ ನ್ಯಾಯಾಲಯದ ಅಟಾರ್ನಿ, ಅಥವಾ

(iii) ಬಾಂಬೆ ಪ್ಲೀಡರ್ಸ್ ಅಧಿನಿಯಮ, 1920ರಡಿಯಲ್ಲಿ ನೋಂದಾಯಿತನಾದ ಪ್ಲೀಡರ್

- ಆಗಿದ್ದವರಾಗಿರತಕ್ಕದ್ದು.

(3) ಉಪ ಮತ್ತು ಸಹಾಯಕ ಧರ್ಮಾದಾಯ ಆಯುಕ್ತರು, ಈ ಅಧಿನಿಯಮದ ಉಪಬಂಧಗಳಡಿ ಅಥವಾ ಅವುಗಳ ಮೂಲಕ ಉಪಬಂಧಿಸಿರಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**xxx xxx xxx**

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಕಾಸೂ 72, ಪ್ರತಿಗಳು 250, 17ನೇ ಡಿಸೆಂಬರ್ 2025